



ಎದೆಯೊಳಗೂ ಹೊರಗೂ ಭೋರ್ಗರೆತ!

## ಎರ್ಮಾಯಿ ಹೆಸರು ಯಾಕಾಗಿ?

ಏಳೂವರೆ ಹಳ್ಳ ಎನ್ನುವ ಸ್ಥಳ ಎರ್ಮಾಯಿ ಜಲಪಾತದ ಉಗಮ ಸ್ಥಳ ಎನ್ನಲಾಗಿದೆ. ಈ ಹಿಂದೆ ಏಳು ಮಂದಿ ಯುವಕರು ಗದ್ದೆ ಉಳುಮೆ ಮಾಡಿ, ಉಳುಮೆ ಮಾಡಿದ ಎತ್ತುಗಳನ್ನು ಜಲಪಾತ ಇರುವ ಸ್ಥಳದಲ್ಲಿ ತೊಳೆಯುತ್ತಿದ್ದಾಗ ನೆರೆ ಬಂದು ಎತ್ತುಗಳು ಮಾಯವಾದವು ಎಂದು ಸ್ಥಳೀಯರು ಕಥೆಯೊಂದನ್ನು ಹೇಳುತ್ತಾರೆ. ತುಳು ಭಾಷೆಯಲ್ಲಿ ಎತ್ತಿಗೆ ‘ಎರು’ ಎಂದು ಹೇಳಲಾಗುತ್ತದೆ. ಎತ್ತುಗಳು ಮಾಯವಾದ ಸ್ಥಳ ‘ಎರು ಮಾಯ’ ಆಗಿ, ನಂತರದಲ್ಲಿ ‘ಎರ್ಮಾಯಿ’ ಆಗಿದೆ ಎನ್ನಲಾಗುತ್ತದೆ.

ನೀರು ಹರಿದೂ ಹರಿದೂ ಇಲ್ಲಿನ ಕಲ್ಲುಗಳು ಬಲು ನುಣುಪು. ಪ್ರವಾಸಿಗರು ಸಾಕಷ್ಟು ಎಚ್ಚರಿಕೆಯಿಂದ ಕಲ್ಲುಗಳ ಮೇಲೆ ಓಡಾಡುವುದು ಸೂಕ್ತ. ಶಿವರಾಜ್‌ಕುಮಾರ್ ನಟನೆಯ ‘ಚಿಗುರಿದ ಕನಸು ಸಿನಿಮಾದ ಶೂಟಿಂಗ್ ಇಲ್ಲಿ ನಡೆದಿತ್ತು. ಪ್ರವಾಸಿಗರು ಇಲ್ಲಿನ ಜಲಪಾತದ ಸೌಂದರ್ಯವನ್ನು ಆಸ್ವಾದಿಸುವಾಗ ಎಚ್ಚರಿಕೆ ವಹಿಸುವುದು ಅಗತ್ಯ.

## ತಲುಪುವುದು ಹೇಗೆ?

ಎರ್ಮಾಯಿ ಜಲಪಾತ ಮಂಗಳೂರಿನಿಂದ ಸುಮಾರು 85 ಕಿ.ಮೀ. ದೂರದಲ್ಲಿದೆ. ಧರ್ಮಸ್ಥಳದಿಂದ ಸುಮಾರು 33 ಕಿ.ಮೀ. ದೂರ ಇದೆ. ಉಜಿರೆಯಿಂದ ಚಾರ್ಮಾಡಿ–ಕೊಟ್ಟಿಗೆಹಾರ ರಸ್ತೆಯಲ್ಲಿ ಹೊರಟು, ಸೋಮಂತಡ್ಕ ಎಂಬಲ್ಲಿನ ತಿರುವು ರಸ್ತೆಯಲ್ಲಿ, ಸುಮಾರು 20 ಕಿ.ಮೀ. ದೂರ ಇರುವ ಕಾಜೂರು ಎಂಬಲ್ಲಿ ಇಳಿಯಬೇಕು. ಅಲ್ಲಿಂದ ತೋಟದ ಮಧ್ಯೆ ಸುಮಾರು 2 ಕಿ.ಮೀ. ದೂರ ಸಾಗಿದಾಗ ಜಲಪಾತ ಸಿಗುತ್ತದೆ.

ಬೆಳ್ತಂಗಡಿಯಿಂದ ಕಿಲ್ಲೂರು ಕೊಲ್ಲಿ ಮೂಲಕ ಕಾಜೂರು ತಲುಪಿ, ಅಲ್ಲಿಂದ ಜಲಪಾತದ ದಾರಿಯನ್ನು ಹಿಡಿಯಬಹುದು. ಸುಮಾರು 2 ಕಿ.ಮೀ. ನಡೆದು ಅಥವಾ ಬೈಕ್, ಖಾಸಗಿ ಜೀಪಿನಲ್ಲಿ ಜಲಪಾತದ ಪ್ರವೇಶ ದ್ವಾರದ ಹತ್ತಿರ ಹೋಗಬಹುದು. ಈಚೆಗೆ ಕಬ್ಬಿಣದ ಸೇತುವೆ ನಿರ್ಮಿಸಲಾಗಿದೆ.

ಪ್ರವೇಶ ದ್ವಾರದಿಂದ ಸುಮಾರು ಅರ್ಧ ಕಿಲೋ ಮೀಟರ್ ದಾರಿಯನ್ನು ಕಾಲು ನಡಿಗೆಯಲ್ಲಿ ಸಾಗಿದಾಗ ಜಲಪಾತ ಸಿಗುತ್ತದೆ. ಖಾಸಗಿ ಸ್ಥಳದ ತೋಟದ ಮಧ್ಯೆ ಸಾಗುವಾಗ ಕಿರು ವಿದ್ಯುತ್ ಉತ್ಪಾದನಾ ಘಟಕ ಕಣ್ಣಿಗೆ ಬೀಳುತ್ತದೆ. ಇದರ ಮೂಲಕ ಸುತ್ತಲ ಮನೆಗಳಿಗೆ ನಿರಂತರವಾಗಿ ವಿದ್ಯುತ್ ದೊರಕುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದು ಪ್ರಾಕೃತಿಕ ಸಂಪತ್ತಿನ ಬಳಕೆಗೆ ಉತ್ತಮ ಉದಾಹರಣೆ.

ಎರ್ಮಾಯಿ ಜಲಪಾತದ ಕಡೆ ಬರುವವರು ಧರ್ಮಸ್ಥಳ, ಉಜಿರೆ, ಬೆಳ್ತಂಗಡಿಯಿಂದ ತಿಂಡಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡು ಬರುವುದು ಸೂಕ್ತ. ಇಲ್ಲಿ ಯಾವುದೇ ಹೋಟೆಲ್ ಇಲ್ಲ. ಪ್ರವಾಸಿಗರು ಎರ್ಮಾಯಿ ಜೊತೆಗೆ, ಹತ್ತಿರದಲ್ಲೇ ಇರುವ ಅಬ್ಬಿ ಫಾಲ್ಸ್, ಬಲ್ಲಾಳರಾಯನ ದುರ್ಗದ ಕಡೆಗೆ ಪ್ರವಾಸದ ಯೋಜನೆ ರೂಪಿಸಿಕೊಳ್ಳಬಹುದು.

ಪ್ರತಿಕ್ರಿಯಿಸಿ: feedback@sudha.co.in


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
“ಗುರೂಜಿ ಮಹೇಶ್‌ಭಟ್”
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517